(ಸದನವು ಬೆಳಗ್ಗೆ: 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಾಗ ಅಧ್ಯಕ್ಷ ಪೀಠವನ್ನು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಅಲಂಕರಿಸಿದರು)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳಲ್ಲಿ ವಿನಂತಿ, ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ತಮ್ಮ ಸಹಕಾರ ಬಹಳ ಮುಖ್ಯ. ಕೊನೆಯ ಹಂತದವರೆಗೆ ಸದನ ಚೆನ್ನಾಗಿ ನಡೆದುಕೊಂಡು ಬಂದಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ಮಹಾರಾಷ್ಟ್ರಗರಿಂದ ಕನ್ನಡಿಗರ ಮೇಲೆ ಬಹಳ ದೌರ್ಜನ್ಯ ನಡೆಯುತ್ತಿದೆ. ನಿನ್ನೆ ಮತ್ತು ಮೊನ್ನೆಯಿಂದ ಬಹಳ ಅನಾಹುತ ನಡೆಯುತ್ತಿದೆ.

(ಗೊಂದಲ)

1. ಕನ್ನಡ ನೆಲದ ಮೇಲೆ ಮಹಾರಾಷ್ಟ್ರದವರ ದೌರ್ಜನ್ಯ

ಶ್ರೀ ವೈ.ಎಸ್.ವಿ. ದತ್ತ:– ಕನ್ನಡದ ನೆಲದ ಮೇಲೆ ಮಹಾರಾಷ್ಟ್ರದವರ ದೌರ್ಜನ್ಯ ಮತ್ತು ದಬ್ಬಾಳಿಕೆ ಎಲ್ಲವೂ ನಡೆಯುತ್ತಿದೆ. ಆ ಕಾರಣಕ್ಕಾಗಿ ಈ ಸದನ ನಡೆಯಬೇಕು. ಇದು ಕನ್ನಡಿಗರ ಸ್ವಾಭಿಮಾನದ ಪ್ರಶ್ನೆ. ಅದರ ಬಗ್ಗೆ ಚರ್ಚೆ ನಡೆಯಬೇಕು. ಇಡೀ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಎಲ್ಲಾ ಕನ್ನಡ ಪರ ಸಂಘಟನೆಗಳು ಬೀದಿಗಿಳಿದಿವೆ. ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾಗಿರುವಂಥದ್ದು.

(ಗೊಂದಲ)

(ಈ ಹಂತದಲ್ಲಿ ಬಿಜೆಪಿಯ ಸದಸ್ಯರು ಸಿ.ಬಿ.ಐ.ತನಿಖೆ ಆಗಬೇಕೆಂದು ಘೋಷಣೆ ಕೂಗುತ್ತಿದ್ದರು)